OS No.197/2012 PW-2

<u>ದಿನಾಂಕ **28.03.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಲ್ ಎಂ ವಕೀಲರಿಂದಃ</u>

ನನ್ನ ಸ್ವಂತ ಊರು ಸಂಕಲಗೆರೆ, ಚನ್ನಪಟ್ಟಣ ತಾಲ್ಲೂಕು. ಈಗ ನಾನು ಬಿಡದಿಯಲ್ಲಿ 20 ವರ್ಷಗಳಿಂದ ವಾಸ ಮಾಡಿಕೊಂಡಿದ್ದೇನೆ. ನಾನು ಮದುವೆಯಾದ 3 ವರ್ಷಗಳ ನಂತರ ಬಿಡದಿಗೆ ಹೋಗಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಜಮೀನು ಸಂಕಲಗೆರೆಯಲ್ಲಿ ಇದೆ. 1 ಎಕರೆ ನನ್ನ ತಂದೆಯ ಹೆಸರಿನಲ್ಲಿದೆ. ವ್ಯವಸಾಯ ಬಿಟ್ಟು ನನಗೆ ಬೇರೆ ಉದ್ಯೋಗ ಇಲ್ಲ. 12-13 ವರ್ಷಗಳಿಂದ ಪ್ರತಿವಾದಿ ಪರಿಚಯ. ಅವರು ವಾದಿ ಮುಖಾಂತರ ಪರಿಚಯ. ನಾನು ವಾದಿಯ ಮಗಳನ್ನು ಮದುವೆಯಾಗಿರುತ್ತೇನೆ. ನಾನು ಮದುವೆಯಾದಾಗಿನಿಂದ ವಾದಿ ಮನೆಯಲ್ಲಿದ್ದೇನೆಂದರೆ ಸುಳ್ಳು.

2. ವ್ಯವಹಾರದ ಮಾತುಕತೆ ಯಾವಾಗ ಆಯಿತು ಎಂದು ಗೊತ್ತಿಲ್ಲ. ಮೊದಲನೇ ಬಾರಿಗೆ ಮಾತುಕತೆಯಾದಾಗ ನಾನು ಇರಲಿಲ್ಲ. ಮೊದಲನೇ ಬಾರಿಗೆ ಮಾತುಕತೆಯಾದಾಗ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಕರಾರು ಪತ್ರವನ್ನು ವಾದಿ ಬೆರಳಚ್ಚು ಮಾಡಿಸಿರುತ್ತಾರೆ. ಬೆರಳಚ್ಚು ಮಾಡಿಸುವಾಗ ನಾನು ಇರಲಿಲ್ಲ. ನನ್ನ ಮಾವ ಆಸ್ತಿವಂತರು, ಬಾಡಿಗೆ ಬರುತ್ತದೆ ಮತ್ತು ಬಿಡದಿಯಲ್ಲಿ ಜಮೀನು ಮಾರಿದ್ದರು. ಜಮೀನನ್ನುಯಾವಾಗ ಎಷ್ಟು ಹಣಕ್ಕೆ ಮಾರಾಟ ಮಾಡಿದರು ಎಂದು ನನಗೆ ಗೊತ್ತಿಲ್ಲ. ಕರಾರು ಆದ 6-7 ತಿಂಗಳ ಹಿಂದಿನಿಂದ ಪ್ರತಿವಾದಿ ಪರಿಚಯ. ವಾದಿ ನಗದು ಮೂಲಕ ಹಣವನ್ನು ಕೊಟ್ಟಿರುತ್ತಾರೆ. ವಾದಿ ಕರಾರು ಪತ್ರದ ಬಗ್ಗೆ ತಿಳಿಸಿರುತ್ತಾರೆ.ಆಗ ನಾನು ಸಂಕಲಗೆರೆಯಲ್ಲಿ ವಾಸಮಾಡಿಕೊಂಡಿದ್ದೆ. ನಾನು ಕರಾರು ಆಗುವ ಕಾಲಕ್ಕೆ ನನ್ನ ಮಾವನ ಮನೆಯಲ್ಲಿದ್ದೆ ಎಂದರೆ ಸುಳ್ಳು. ದಿಃ10.06.2011 ರಲ್ಲಿ ನನ್ನ ಮಾವ ಪ್ರತಿವಾದಿಗೆ 8 ಲಕ್ಷ ಹಣವನ್ನು ಕೊಟ್ಟಿಲ್ಲ ಮತ್ತು ಅಷ್ಟೊಂದು ಹಣ ಇರಲಿಲ್ಲ ಎಂದರೆ ಸುಳ್ಳು. ವಾದಿಗೆ ಅಷ್ಟೊಂದು ಸಾಮರ್ಥ್ಯ ಇರಲಿಲ್ಲ ಎಂದರೆ ಸುಳ್ಳು.

ವಕೀಲರು ಕರಾರು ಪತ್ರವನ್ನು ತೋರಿಸಿದಾಗ ಸಾಕ್ಷಿಯು ನನ್ನ ಸಹಿ ಇದೆ ಎಂದು ಹೇಳುತ್ತಾರೆ. ಸದರಿ ಪತ್ರದಲ್ಲಿರುವ ಸಹಿಯನ್ನು ನಿಡಿ--2 ಎಂದು ಗುರುತಿಸಲಾಯಿತು. ವಕೀಲರು ಸದರಿ ಕರಾರು ಪತ್ರವನ್ನು ತೋರಿಸಿದಾಗ ಸಾಕ್ಷಿಯು ನನ್ನ ಇನ್ನೊಂದು ಸಹಿ ಇದೆ ಎಂದು ಹೇಳುತ್ತಾರೆ. ಸದರಿ ಪತ್ರದಲ್ಲಿರುವ ಇನ್ನೊಂದು ಸಹಿಯನ್ನು ನಿಡಿ--3 ಎಂದು ಗುರುತಿಸಲಾಯಿತು. ವಾದಿ ಮತ್ತು ಪ್ರತಿವಾದಿಗೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸುಳ್ಳು. ವಾದಿ ಮತ್ತು ಪ್ರತಿವಾದಿಗೆ ಯಾವುದೇ ಪರಿಚಯವಿಲ್ಲ ಎಂದರೆ ಸುಳ್ಳು. 2005 ನೇ ಇಸವಿಯಿಂದ ನಾನು ಮತ್ತು ಪ್ರತಿವಾದಿ ಪರಿಚಯ ಎಂದರೆ ನಿಜ. ಪ್ರತಿವಾದಿ ಚನ್ನಪಟ್ಟಣದಲ್ಲಿ ಹಲವಾರು ಜಮೀನುಗಳನ್ನು ಖರೀದಿ ಮಾಡಿರುತ್ತಾರೆಂದರೆ ನಿಜ. ಈ ಜಮೀನುಗಳನ್ನು ನಾನೇ ಮುಂದೆ ನಿಂತು ಕೊಡಿಸಿದ್ದೇನೇಂದರೆ ನಿಜ. ನಿಡಿ-1(ಎ) ಸಹಿ ನನ್ನದೇ ಆಗಿರುತ್ತದೆ. ಪ್ರತಿವಾದಿ ಹೆಂಡತಿ ಲೀಲಾವತಿ ನನಗೆ ಪರಿಚಯ ಎಂದರೆ ಸಾಕ್ಷಿಯು ನನ್ನ ಮಾವನ ಕಡೆಯಿಂದ ಪರಿಚಯ ಎಂದು ನುಡಿಯುತ್ತಾರೆ. ನಿಡಿ-1 ಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ನನ್ನ ಸಹಿ ಇರುವ ನಿಡಿ-2 ಅನ್ನು ನಾನೇ ಮುಂದೆ ನಿಂತು ಮಾಡಿಸಿರುತ್ತೇಂದರೆ ಸಾಕ್ಷಿಯು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಪ್ರತಿವಾದಿಯ ಹೆಂಡತಿಗೆ ಸೇರಿದ ಮನೆ ಚನ್ನಪಟ್ಟಣದಲ್ಲಿದೆ ಎಂದರೆ ನಿಜ. ಈ ಮನೆಗೆ ಸಂಬಂದಪಟ್ಟಂತೆ ಕರಾರು ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ.ಪ್ರತಿವಾದಿ ಮತ್ತು ದೊಡ್ಡೇಗೌಡರವರ ನಡುವೆ 2006 ರಲ್ಲಿ ಆದ ಕರಾರು ಪತ್ರಕ್ಕೆ ನಾನು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇನೆಂದರೆ ನಿಜ. ಪ್ರತಿವಾದಿ ಮತ್ತು ನಾರಾಯಣಗೌಡರವರ ನಡುವೆ 2006 ರಲ್ಲಿ ಆದ ಕರಾರು ಪತ್ರಕ್ಕೆ ನಾನು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇನೆಂದರೆ ನಿಜ. ಪ್ರತಿವಾದಿ ಮತ್ತು ಲಕ್ಷ್ಮೀ ರವರ ನಡುವೆ 2007 ರಲ್ಲಿ ಆದ ಕರಾರು ಪತ್ರಕ್ಕೆ ನಾನು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇನೆಂದರೆ ನಿಜ. ಪ್ರತಿವಾದಿ ಮತ್ತು ಚಿಕ್ಕಮ್ಮ ರವರ ನಡುವೆ 2005 ರಲ್ಲಿ ಆದ ಕರಾರು ಪತ್ರಕ್ಕೆ ನಾನು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇನೆಂದರೆ ನಿಜ . ಪ್ರತಿವಾದಿ ಮತ್ತು ಪುಟ್ಟಮ್ಮರವರ ನಡುವೆ 2005 ರಲ್ಲಿ ಆದ ಕರಾರು ಪತ್ರಕ್ಕೆ ನಾನು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇನೆಂದರೆ ನಿಜ. 2005 ರಿಂದ ನಾನು ಪ್ರತಿವಾದಿಯ ವ್ಯವಹಾರಗಳನ್ನು ಮುಂದೆ ನಿಂತು ನೋಡಿಕೊಳ್ಳುತ್ತಿದ್ದೇನೆಂದರೆ ಸುಳ್ಳು. ನಾನೇ

ಮುಂದೆ ನಿಂತು ಪ್ರತಿವಾದಿಯನ್ನು ಕರೆದುಕೊಂಡು ಹೋಗಿ ವಾದಿಯ ಜೊತೆ ಕರಾರು ಪತ್ರವನ್ನು ಮಾಡಿಸಿರುತ್ತೇನೆಂದರೆ ಸುಳ್ಳು ಪ್ರತಿವಾದಿಗೆ ನನ್ನ ಮೇಲೆ ಭರವಸೆ ಮತ್ತು ನಂಬಿಕೆ ಇದ್ದುದ್ದರಿಂದ ಯಾವುದೇ ಹಣ ಕೊಡದೇ ಇದ್ದರೂ ಪ್ರತಿವಾದಿ ಸಹಿ ಮಾಡಿದ್ದಾನೆಂದರೆ ಸುಳ್ಳು. ನಾನು ಮತ್ತು ವಾದಿ ಶಾಮೀಲಾಗಿ ಪ್ರತಿವಾದಿಗೆ ಮೋಸ ಮಾಡಲು ಕರಾರು ಪತ್ರವನ್ನು ಇಟ್ಟುಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ಪ್ರತಿವಾದಿ ಹಣವಂತ ಎಂದರೆ ನನಗೆ ಗೊತ್ತಿಲ್ಲ. 8 ಲಕ್ಷ ಹಣವನ್ನು ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ಅಧಿಕಾರಿಯ ಮುಂದೆ ವಾದಿ ಕೊಟ್ಟಿರುತ್ತಾನೆ. ಆಗ ನಾನು, ಶಿವಣ್ಣ, ಪತ್ರ ಬರಹಗಾರರು, ನನ್ನ ಹೆಂಡತಿ ಮತ್ತು ವಾದಿ ಇದ್ದೆವು . ಈ ಬಗ್ಗೆ ಕರಾರಿನಲ್ಲಿ ನಮೂದು ಮಾಡಿದ ಬಗ್ಗೆ ಗೊತ್ತಿಲ್ಲ. ವಾದಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ಶಿವಣ್ಣ ನನ್ನ ದೂರದ ಸಂಬಂದಿಕರು. ಶಿವಣ್ಣರವರು ಉಪನೊಂದಣಾಧಿಕಾರಿಯವರ ಕಛೇರಿಗೆ ಅವರೇ ಬಂದಿರುತ್ತಾರೆ. ನಾನು ಆಸ್ತಿ ಕಮೀಷನ್ ವ್ಯವಹಾರದಿಂದ ಜೀವನ ಮಾಡುತ್ತಿದ್ದೇನೆಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.